# ಕಾದಿರುವಳು ಕೃತಿ



ಕೃತಿ ಸನೋನ್‌ಗೆ 2019 ಖುಷಿ ತಂದ ವರ್ಷವೇನೂ ಅಲ್ಲ. ಸಾಲು ಸಾಲಾಗಿ ಚಿತ್ರಗಳೇನೋ ಬಂದವು. ಆದರೆ ಯಾವ ಚಿತ್ರಗಳೂ ಹೇಳಿಕೊಳ್ಳುವಂತಹ ಹೆಸರು ತಂದುಕೊಡಲಿಲ್ಲ. ಮೊದಲು ಬಂದ 'ಲುಕಾ ಚುಪ್ಪಿ' ಕಾರ್ತಿಕ್ ಆರ್ಯನ್ ಇದ್ದರೂ ಫ್ಲಾಪ್ ಆಯಿತು. 'ಕಳಂಕ್' ದೊಡ್ಡ ಬ್ಯಾನರ್ ಆಗಿದ್ದರೂ ಪ್ರಯೋಜನ ಆಗಲಿಲ್ಲ. 'ಪಾಣಿಪತ್'ನ ಉತ್ತಮ ಪಾತ್ರಕ್ಕೆ ಭರ್ಜರಿ ಪ್ರಚಾರ ಇದ್ದರೂ ಬಾಕ್ಸ್‌ಆಫೀಸ್‌ನಲ್ಲಿ ನಿಲ್ಲಲಿಲ್ಲ. 'ಹೌಸ್‌ಫುಲ್ 4' ಕಲೆಕ್ಷನ್ ಚೆನ್ನಾಗಿ ಆದರೂ ಹೀರೊಗಳ ದಂಡೇ ಅಲ್ಲಿದ್ದುದರಿಂದ ಕೃತಿಗೆ ಅಭಿನಯಕ್ಕೆ ಹೆಚ್ಚಿನ ಅವಕಾಶವೇನೂ ಇರಲಿಲ್ಲ. 'ಪತಿ ಪತ್ನಿ ಔರ್ ವೊ' ಚಿತ್ರ 20 ದಿನಗಳಲ್ಲಿ ₹ 80 ಕೋಟಿ ಕಲೆಕ್ಷನ್ ದಾಟಿ ಹಿಟ್ ಅನ್ನಿಸಿದ್ದರೂ ಅದರಲ್ಲಿ ಕೃತಿಗೆ ಸಣ್ಣದೊಂದು ವಿಶೇಷ ಪಾತ್ರ ಅಷ್ಟೇ.

ಈ ವರ್ಷ ಕೃತಿ ಅತಿ ಹೆಚ್ಚು ನಿರೀಕ್ಷೆ ಇಟ್ಟುಕೊಂಡಿರುವ ಚಿತ್ರ 'ಫರ್ಜಿ'. ಶಾಹಿದ್ ಕಪೂರ್ ಮತ್ತು ನವಾಜುದ್ದೀನ್ ಸಿದ್ದಿಕಿ ಜೊತೆಗೆ ಈ ಚಿತ್ರದಲ್ಲಿ ನಟಿಸುತ್ತಿರುವ ಕೃತಿ, ಚಿತ್ರದಲ್ಲಿ ನಟನೆಗೆ ಸಾಕಷ್ಟು ಅವಕಾಶ ಪಡೆದುಕೊಂಡಿದ್ದಾಳಂತೆ. ಆದರೆ ಈ ಚಿತ್ರ ಹಾಸ್ಯ ಚಿತ್ರವಾಗಿರುವುದರಿಂದ ಕೃತಿಗೆ ಹೆಚ್ಚೇನೋ ಕೀರ್ತಿ ತರುವುದಿಲ್ಲ ಎನ್ನುವ ವಾದವೂ ಇದೆ. ಆನಂದ್ ಎಲ್ ರೈ ನಿರ್ದೇಶನದ ಇನ್ನೊಂದು ಚಿತ್ರಕ್ಕೂ ಕೃತಿ ಸಹಿ ಹಾಕಿದ್ದಾಳೆ. ಈ ಚಿತ್ರದಲ್ಲಿ ಟೈಗರ್ ಶ್ರಾಫ್ ನಾಯಕನಾಗಿರುವುದು ಕೃತಿಯಲ್ಲಿ ಹೊಸ ಆಶಾಭಾವ ಮೂಡಿಸಿದೆ. ವಿಶಾಲ್ ಭಾರದ್ವಾಜ್ ನಿರ್ದೇಶನದ ಮತ್ತೊಂದು ಹೊಸ ಚಿತ್ರದಲ್ಲಿ ಅರ್ಜುನ್ ಕಪೂರ್ ನಾಯಕನಾಗಿರುವುದು ಕೃತಿಗೆ ಸಂತೋಷ ತಂದಿರುವ ಇನ್ನೊಂದು ಸಂಗತಿ. ಈ ಎರಡೂ ಸಿನಿಮಾಗಳು ಕೃತಿಗೆ ದೊಡ್ಡ ಮಟ್ಟದ ಯಶಸ್ಸು ಕೊಡುವ ಸಾಧ್ಯತೆಗಳಿವೆ. ಬಹುಶಃ 2020ರ ಉತ್ತರಾರ್ಧದಲ್ಲಿ ಕೃತಿ ಬಾಲಿವುಡ್‌ನಲ್ಲಿ ಮಹತ್ವದ್ದೇನಾದರೂ ಸಾಧಿಸಬಹುದು. ■



# ರಾಧೇ ಸಲ್ಮಾನ್

ಸಲ್ಮಾನ್ ಖಾನ್ ಅಭಿನಯದ ಸಿನಿಮಾ ಬಾಕ್ಸ್‌ಆಫೀಸ್‌ನಲ್ಲಿ 100 ಕೋಟಿ ರೂಪಾಯಿಗಳ ಕಲೆಕ್ಷನ್ ದಾಟುವುದು ಇತ್ತೀಚಿನ ದಿನಗಳಲ್ಲಿ ಮಾಮೂಲಿ ಸಂಗತಿ. ಆದರೆ ಈ ನೂರು ಕೋಟಿ ಎಷ್ಟು ದಿನಗಳಲ್ಲಿ ಬಂತು ಎನ್ನುವುದಷ್ಟೇ ಕುತೂಹಲದ ಸಂಗತಿ. ಈ ಹಿಂದಿನ ಸಿನಿಮಾಗಳಿಗೆ ಹೋಲಿಸಿದರೆ ಈ ಸಲ ಸಲ್ಮಾನ್ ಅಭಿನಯದ 'ದಬಾಂಗ್ 3', 100 ಕೋಟಿ ದಾಟಲು ಐದು ದಿನ ತೆಗೆದುಕೊಂಡಿದೆ. ಅದಕ್ಕೆ ಕಾರಣ ದೇಶದಾದ್ಯಂತ ನಡೆಯುತ್ತಿರುವ ಎನ್‌ಆರ್‌ಸಿ ಕಾಯ್ದೆ ವಿರುದ್ಧ ಜನಹೋರಾಟ. ಉತ್ತರ ಭಾರತದ ಹಲವು ನಗರಗಳಲ್ಲಿ ಕಳೆದ ಒಂದು ವಾರದಿಂದ ಸೆಕ್ಷನ್ 144 ಹೇರಿರುವುದರಿಂದ ಜನರು ಥಿಯೇಟರ್‌ಗೆ ಬರುವುದು ತಡವಾಗುತ್ತಿದೆ. ಈ ಹಿಂದೆ 'ಭಾರತ್' ಬಿಡುಗಡೆಯಾದಾಗ ಮೊದಲ ದಿನವೇ ₹ 52 ಕೋಟಿ ಬಾಚಿಕೊಂಡಿತ್ತು. ದಬಾಂಗ್ 3 ಇಷ್ಟು ಹಣ ಸಂಗ್ರಹಿಸಲು ಎರಡು ದಿನ ಬೇಕಾಯ್ತು.

ಆರಂಭದ ಕಲೆಕ್ಷನ್ ಇಳಿತವಾಗಿದ್ದಕ್ಕೆ ಸಲ್ಮಾನ್ ಬೇಸರವೇನೂ ಮಾಡಿಕೊಂಡಿಲ್ಲ. 'ಇಂತಹ ಕಷ್ಟದ ಪರಿಸ್ಥಿತಿಯಲ್ಲಿ ಅಭಿಮಾನಿಗಳು ಥಿಯೇಟರ್‌ಗೆ ಬರುವುದಾದರೂ ಹೇಗೆ? ಚಿತ್ರದ ಕಲೆಕ್ಷನ್‌ಗಿಂತ ಚಿತ್ರಪ್ರೇಮಿಗಳ ಸುರಕ್ಷೆ ಮುಖ್ಯ' ಎಂದಿದ್ದಾನೆ ಸಲ್ಮಾನ್.

ಅಂದ ಹಾಗೆ ಸಲ್ಮಾನ್‌ನ ಪೊಲೀಸ್ ಡ್ರೆಸ್ ಮೋಹ ಇನ್ನೂ ಇಳಿದಿಲ್ಲ. 2020ರ ಈದ್‌ಗೆ ಬಿಡುಗಡೆ ಕಾಣಲಿರುವ ಆತನ ಮುಂದಿನ ಚಿತ್ರ 'ರಾಧೇ'. ಮೇ ತಿಂಗಳ ಕೊನೆಗೆ ತೆರೆಗೆ ಬರಲಿರುವ ಈ ಚಿತ್ರದಲ್ಲೂ ಸಲ್ಮಾನ್‌ನದ್ದು ಪೊಲೀಸ್ ಪಾತ್ರವೇ. 'ಆದರೆ ಇದು ಅಂಡರ್‌ಕವರ್ ಪೊಲೀಸ್ ಪಾತ್ರ. ಯೂನಿಫಾರ್ಮ್ ಇರಲ್ಲ' ಎಂದಿದ್ದಾನೆ ಸಲ್ಮಾನ್. ಈ ಹಿಂದೆ 'ತೇರೆ ನಾಮ್' (2003) ಚಿತ್ರದ ನಾಯಕನಿಗೆ ಇದೇ ಹೆಸರಿತ್ತು. ಆ ಬಳಿಕ 'ವಾಂಟೆಡ್' (2009) ಚಿತ್ರದಲ್ಲೂ ಅಂಡರ್‌ಕವರ್ ಪೊಲೀಸ್ ಪಾತ್ರಕ್ಕೆ ರಾಧೇ ಎನ್ನುವ ಹೆಸರೇ ಇತ್ತು. ಈಗ ಮೂರನೇ ಬಾರಿಗೆ ರಾಧೇ ಬರುತ್ತಿದ್ದಾನೆ. ಅಂದ ಹಾಗೆ, ದಬಾಂಗ್ 3 ಯಶಸ್ಸಿನ ಗುಂಗಿನಲ್ಲಿರುವ ಪ್ರಭುದೇವ, ರಾಧೇ ಚಿತ್ರಕ್ಕೂ ನಿರ್ದೇಶಕ.

■ ಬಿಂದು